ಶ್ರೀ ಗೋವಿಂದ ಎಂ. ಕಾರಜೋಳ:– ಸರ್ಕಾರಕ್ಕೆ ಜವಾಬ್ದಾರಿಯಿಲ್ಲವೆಂದು ನಿನ್ನೆಯೇ ನಾನು ನೋಟಿಸ್ ಕೊಟ್ಟಿದ್ದೇನೆ. ಅದು ಪತ್ರಿಕೆಗಳಲ್ಲಿ ಬಂದಿದೆ.

ಶ್ರೀ ಎಂ.ಬಿ. ಪಾಟೀಲ್:– ಇದು ನನಗೆ ಈಗ ಬಂದಿದೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಗೋವಿಂದ ಎಂ. ಕಾರಜೋಳರವರು ಬಾವಿಯಲ್ಲಿ ಧರಣಿ ನಿರತರಾದರು)

10. 2014–15 ನೇ ಸಾಲಿನ ಆಯವ್ಯಯದ ಮೇಲೆ ಮುಂದುವರಿದ ಸಾಮಾನ್ಯ ಚರ್ಚೆ

ಶ್ರೀ ಎಸ್. ಚಿಕ್ಕಮಾದು (ಹೆಚ್.ಡಿ.ಕೋಟೆ):– ಮಾನ್ಯ ಅಧ್ಯಕ್ಷರೆ, 2014–15ನೇ ಸಾಲಿನ ಆಯವ್ಯಯ ಪತ್ರದ ಮೇಲೆ ಮಾತನಾಡಲು ಅವಕಾಶ ನೀಡಿರುವುದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತಾ, ನಾನು ಹೆಚ್ಚಿಗೆ ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ಸಲಹೆಗಳ ರೂಪದಲ್ಲಿ ಮಾತನಾಡುತ್ತೇನೆ. 2014–15ನೇ ಸಾಲಿನ ಆಯವ್ಯಯವನ್ನು ಮಂಡಿಸಿದ್ದು, ಅದರಲ್ಲಿ ಉತ್ತಮವಾದ ಕಾರ್ಯಕ್ರಮಗಳನ್ನು ಮಂಡಿಸಿರುವುದಕ್ಕೆ ನಾನು ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಅದರಲ್ಲಿ ಕೆಲವು ಮಾರ್ಪಾಡುಗಳನ್ನು ಸರ್ಕಾರ ಮಾಡಿಕೊಳ್ಳಬೇಕಾಗುತ್ತದೆ. ಇದುವರೆವಿಗೂ ಆಯವ್ಯಯದ ಮೇಲೆ ನಮ್ಮ ಗೌರವಾನ್ವಿತ ಸದಸ್ಯರುಗಳು ಮಾತನಾಡಿದ್ದಾರೆ. ಎಲ್ಲರ ದೃಷ್ಟಿಕೋನವೇನೆಂದರೆ ಸರ್ಕಾರ ಯಾವುದೇ ಕಾರ್ಯಕ್ರಮಗಳನ್ನು ಜಾರಿಗೆ ತಂದಂತಹ ಸಂದರ್ಭದಲ್ಲಿ ಅದನ್ನು ಅನುಷ್ಠಾನಗೊಳಿಸುವುದು ನಮ್ಮ ಸರ್ಕಾರಿ ಅಧಿಕಾರಿಗಳು. ಅಧಿಕಾರಿಗಳು ನಿಷ್ಠೆಯಿಂದ ಆ ಕಾರ್ಯಕ್ರಮಗಳನ್ನು ಜಾರಿಗೆ ತಂದರೆ ಸರ್ಕಾರದ ಉದ್ದೇಶದಲ್ಲಿ ಫಲ ಸಿಗುತ್ತದೆ ಮತ್ತು ಸರ್ಕಾರ ಏನು ಕಾರ್ಯಕ್ರಮವನ್ನು ಜಾರಿಗೆ ತರುವುದೋ ಅದು ನೇರವಾಗಿ ಫಲಾನುಭವಿಗಳಿಗೆ ದೊರಕುವ ಅವಕಾಶವಾಗುತ್ತದೆ. ನಾನು ಎಲ್ಲಾ ಅಧಿಕಾರಿಗಳನ್ನು blame ಮಾಡುವುದಿಲ್ಲ. ಕೆಲವೊಂದು ಅಧಿಕಾರಿಗಳು ಸಮಸ್ಯೆಗಳು ಬಂದಾಗ ಆ ಸಮಸ್ಯೆಗೂ ಅವರಿಗೂ ಸಂಬಂಧವೇ ಇಲ್ಲದ